ಶ್ರೀ ಎಸ್. ಬಂಗಾರಪ್ಪ.— ಸ್ವಾಮಿ, ಮಾನ್ಯ ದೇವೇಗೌಡರು ಕೇಳಿರತಕ್ಕಂಥ ಪ್ರಶ್ನೆಗಳಿಗೆಲ್ಲಾ ನಾನು ಈಗಾಗಲೇ ಸ್ಟೇಟ್‌ಮೆಂಟ್‌ನಲ್ಲಿ ಉತ್ತರವನ್ನು ಹೇಳಿಬಿಟ್ಟಿದ್ದೇನೆ. ಆದ್ದರಿಂದ ಆ ಪ್ರಶ್ನೆಗಳಿಗೆ ಈಗಾಗಲೇ ಉತ್ತರ ಬಂದಿದೆ. ಮತ್ತೆ ರಿಪೀಟ್ ಮಾಡುವುದುಬೇಡ.

ಶ್ರೀ ಎಚ್. ಡಿ. ದೇವೇಗೌಡ.—ಈ ಬಗ್ಗೆ ಕ್ರಮ ಯಾವಾಗ ತೆಗೆದುಕೊಳ್ಳುತ್ತೀರಿ ?

ಶ್ರೀ ಎಸ್. ಬಂಗಾರಪ್ಪ.—ಈ ವಿಚಾರದಲ್ಲಿ ಇನ್‌ವೆಸ್ಟಿಗೇಷನ್ ನಡೆಯುತ್ತಿದೆ ಎಂದು ನಾನು ಈಗಾಗಲೇ ಹೇಳಿದ್ದೇನೆ.

ಶ್ರೀ ಎಚ್. ಡಿ. ದೇವೇಗೌಡ.—ಅದು ಯಾವಾಗ ಮುಗಿಯುತ್ತದೆ ?

ಶ್ರೀ ಎಸ್. ಬಂಗಾರಪ್ಪ.—ಆದಷ್ಟು ಶೀಘ್ರವಾಗಿ ನಾವು ಅದನ್ನು ಮುಗಿಸುತ್ತೇವೆ.

ಶ್ರೀ ಎಚ್. ಡಿ. ದೇವೇಗೌಡ.—ಮಾನ್ಯ ಅಧ್ಯಕ್ಷರೆ, ಈ ಬಗ್ಗೆ ಸರ್ಕಾರದವರಿಂದ ನಮಗೆ ಒಂದು ಖಚಿತವಾದ ಉತ್ತರಬೇಕು. ನಾನು ಈ ಸಭೆಯ ಹೆಚ್ಚು ಕಾಲವನ್ನು ತೆಗೆದುಕೊಳ್ಳುವುದಕ್ಕೆ ಹೋಗುವುದಿಲ್ಲ. ಇಲ್ಲಿ ಪೋಲೀಸರ ಕರ್ತವ್ಯ ಲೋಪದಿಂದ ಒಬ್ಬ ವ್ಯಕ್ತಿಯನ್ನು ಸಾಯಿಸತಕ್ಕಂಥ ಘಟನೆ ನಡೆದಿದೆ. ಇದನ್ನೂ ಸರ್ಕಾರದವರೂ ಕೂಡ ಒಪ್ಪಿಕೊಳ್ಳುತ್ತಾರೆ. ವಿಚಾರಣೆಗಾಗಿ ಇದನ್ನು ಸಬ್‌ಡಿವಿಜಲ್ ಮ್ಯಾಜಿಸ್ಟ್ರೇಟ್‌ಗೆ ನೇಮಿಸಿದ್ದಾರೆ. ಅವರೇ ಈ ಬಗ್ಗೆ ಪೂರ್ಣ ವಿಚಾರಣೆ ಮಾಡಬೇಕು. ಈ ಬಗ್ಗೆ ವಿಚಾರಣೆ ಮುಗಿಯುವುದು ಯಾವಾಗ ? ಎಷ್ಟು ದಿವಸದಲ್ಲಿ ವಿಚಾರಣೆಯನ್ನು ಮುಗಿಸಿ ಒಂದು ಎನ್‌ಕ್ವೈರಿ ರಿಪೋರ್ಟನ್ನು ಈ ಸಭೆಗೆ ಕೊಡುವುದಕ್ಕೆ ಸಾಧ್ಯವಾಗುತ್ತದೆ ? ಎಷ್ಟು ದಿವಸದಲ್ಲಿ ಈ ಬಗ್ಗೆ ಕ್ರಮ ತೆಗೆದುಕೊಳ್ಳುತ್ತಾರೆ ? ಈ ವಿಚಾರಗಳ ಬಗ್ಗೆ ನಮಗೆ ಸ್ಪೆಸಿಫಿಕ್ ಉತ್ತರ ಬೇಕು.

ಶ್ರೀ ಎಸ್. ಬಂಗಾರಪ್ಪ.—ಸ್ವಾಮಿ, ಸುಮಾರು ೧೦–೧೫ ದಿವಸದಲ್ಲಿ ಇದನ್ನು ಮುಗಿಸಿ ನಾವು ಈ ಸದನಕ್ಕೆ ವಿಷಯವನ್ನು ತಿಳಿಸುತ್ತೇವೆ. ಮಾನ್ಯ ದೇವೇಗೌಡರು ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್ ರವರೇ ಎನ್‌ಕ್ವೈರಿ ಮಾಡಬೇಕು ಎಂದು ತಿಳಿಸಿದ್ದಾರೆ. The entire thing is now under enquiry to be conducted by the Sub-Divisional Magistrate ಅವರು ಎನ್‌ಕ್ವೈರಿ ೧೦–೧೫ ದಿವಸದಲ್ಲಿ ಮುಗಿಯುಬಹುದು. ಇದಾದಮೇಲೆ ಕೇಸನ್ನು ಚೇಂಜ್ ಮಾಡುವುದಕ್ಕೆ ಬರುವುದಿಲ್ಲ. ನಿಮಗೆ ಪವರ್ ಇಲ್ಲವೇ ಎಂದು ನೀವು ಕೇಳಬಹುದು. ಪವರ್ ಇದೆ. ಒಂದು ಸೆಕ್ಷನ್ ಪ್ರಕಾರ ಒಂದು ಕೇಸನ್ನು ರಿಜಿಸ್ಟರ್ ಮಾಡಿದ್ದರೆ ಇಂಡಿಯನ್ ಪೀನಲ್ ಕೋಡ್ ಕೆಳಗೆ, After investigation or during the course of investigation, If the investigating officer comes to the conclusion that some other offence is committed, under some other provisions of the IPC that section can be changed over to another relevant section. ಇದನ್ನು ಮಾಡಿಕೊಳ್ಳಬಹುದು. ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್ ಎನ್‌ಕ್ವೈರಿಯಾದ ಮೇಲೆ ಅದು ನಿಜವಾಗಿಯೂ ಮರ್ಡರ್ ಕೇಸ್ ಎನ್ನತಕ್ಕಂಥಾದ್ದು ನಮಗೆ ಕಂಡುಬಂದರೆ ಸೆಕ್ಷನ್ ೩೦೨ಕ್ಕೆ ಅದನ್ನು ಕನ್‌ವರ್ಟ್ ಮಾಡುವುದಕ್ಕೆ ಬರುತ್ತದೆ. ಇದನ್ನು ಎನ್‌ಕ್ವೈರಿ ಮಾಡಿಸುತ್ತೇವೆ. ಈ ಕೇಸನ್ನು ಸೆಕ್ಷನ್ ೩೦೨ರ ಕೆಳಗೆ ಹಾಕುತ್ತೇವೆ. ಅದರ ಬಗ್ಗೆ ಅನುಮಾನ ಪಡುವುದು ಬೇಕಿಲ್ಲ.

Re: (ii) Harasment to the Agriculturists of Naragund Taluk by Rdvenue Officials in regard to recovery of arrears of Betterment Levy, Water Tax, Irrigation Tax, etc.

SRI B. R. PATIL (Naragund),—Sir, I call the attention of the Minister for Revenue and Agriculture to the harasment to the Agriculturists of Naragund Taluk by Revenue Officials in regard to recovery of arrears of Betterment Levy, Water Tax. Irrigation Tax, etc.

SRI S. BANGARAPPA (Minister for Revenue and Agriculture) I would like to make the following statement:

Betterment Contribution is leviable on the land holder or the holder of any land which is benefitted by the construction, restoration, expantion or alteration of any irrigation work by the Government. Similarly, water rate is leviable for the water supplied, made available or used for purpeses of irrigation or any other purpose from any irrigation work belonging to or constructed by or on behallf of the Government in accordance with Section 3 and 10 respectivey of the Karnataka Irrigation (Levy of Betterment Contribution and Water Rate) Act, 1957.

Consequent on rivision of water rate, the fixation of water rates have to be done at three different rates with effect from the dates indicated below:

1. 1-7-1965 to 30-6-1972
2. 1-7-1972 to 30-6-1976
3. 1-7-1976 and onwards

As the rules were implemented with retrospectrve effect from 1-7-1965, difficulties were experienced in the matter of recovery of dues. The matter was also raised on the floor of the Legislature and an assurance was also given by Goverument that arrangements would be made whereby the legitimate grievances could be examined and redressed to the extent possible and quickly. Accordingly instructions were issued on 22-4-1970 on itself for the joint inspection of respective atchkats by Assistant Commissioner and Executive Engineers concerned to find out the best possible evidence on the spot in each case and make recommendations regarding the recovery of arrears or their write off. It was also felt that in many cases it will not be possible for the farmers to pay the arrrears of land revenue on account of revision. Hence instructsons were also issued to the Deputy Commissioners to recover the arrears in 3 or 4 instalments.

Instructions were also isseued to all the Deputy Commissioners not to take coersive measures for the recovery of arrears of all dues from small land holders and persons who are in distress, but to take a lenient attitude, giving no room for creating a sense of fear and apprehension in the minds of poor people. However, coersive measures for the recovery of water rate and other dues are being employed only against well-to-do classes of people and others who can afford to pay the arrears of Government dues.

So far no cases of harassment has been reported to Government. If speceific instances are brought to the notice of the Government and same will be looked into.

ಶ್ರೀ ಬಿ. ಆರ್. ಪಾಟೀಲ್.—ಮಾನ್ಯ ಅಧ್ಯಕ್ಷರೆ, ಇದರ ಬಗ್ಗೆ ನಾನು ಸರ್ಕಾರಕ್ಕೆ ಪ್ರಾರ್ಥನೆ ಮಾಡಿಕೋಳ್ಳುತ್ತೇನೆ. ಮೊನ್ನೆ ೩೦ನೇ ತಾರೀಖಿಗೆ ನರಗುಂದ್, ನವಲ್‌ಗುಂದ್, ಸವದತ್ತಿ, ರಾಮದುರ್ಗ ಹಾಗೂ ರೋಣ ತಾ ಈ ತಾಲ್ಲೂಕಿನ ಸುಮಾರು ೧೦,೦೦೦ ಜನ ರೈತರು ವೆಟರ್‌ಮೆಂಟ್ ಲೆವಿ ಹಾಕಿರು ವುದು ಸರಿಯಾಗಿಲ್ಲ, ಅಸೆಸ್‌ಮೆಂಟ್ ಸರಿಯಾಗಿಲ್ಲ, ನಾವು ದುಡ್ಡು ಕೊಡುವುದಿಲ್ಲ ಎಂದು ಹರತಾಳ ಮಾಡಿ ದ್ದಾರೆ. ಇವತ್ತು ತಹಶೀಲ್ದಾರ್ ಆಫೀಸ್ ಮುಂದೆ ೧೦,೦೦೦ ಜನ ರೈತರು ಹಂಗರ್ ಸ್ಟ್ರೈಕ್ ನಡೆಸಿದ್ದಾರೆ, ಇದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕೇಳುತ್ತೇನೆ.

ಶ್ರೀ ಎಸ್. ಆರ್. ಬೊಮ್ಮಾಯಿ.—ಇದೇ ವಿಷಯದ ಬಗ್ಗೆ ನಾನೂ ಕೂಡ ಒಂದು ನೋಟೀಸ್ ಕೊಟ್ಟಿದ್ದೇನೆ, ಅದು ಬರುವುದಕ್ಕೆ ತಡವಾಗಿದೆ. ಸಬ್ಜೆಕ್ಟ್ ಒಂದೇ ಇರುವುದರಿಂದ ನಾನೂ ಕೇಳಿ ಬಿಡುತ್ತೇನೆ. ಈ ಸದನದಲ್ಲಿ ವಾಟರ್ ರೇಟ್ ಮತ್ತು ವೆಟರ್‌ಮೆಂಟ್ ಲೆವಿ ಬಗ್ಗೆ ನಾವು ಅನೇಕ ಸಲ ಚರ್ಚೆ ಮಾಡಿದ್ದೇವೆ. ೧೯೭೭ರಿಂದ ಇದುವರೆಗೆ ಈ ಪ್ರಶ್ನೆ ಈ ಮನೆಯಲ್ಲಿ ಅನೇಕ ಸಲ ಬಂದಿದೆ. ಇದರ ಬಗ್ಗೆ ನಾನು ಉದ್ದವಾಗಿ ಹೇಳುವುದಕ್ಕೆ ಹೋಗುವುದಿಲ್ಲ. ಮಾನ್ಯ ಕೌಜಲಗಿಯವರು ಕಂದಾಯ ಮಂತ್ರಿಗಳಾಗಿದ್ದಾಗ ಹೈಕೋರ್ಟಿನಲ್ಲಿ ತಡೆ ಹಿಡಿಸಿದೆವು ಪುನಃ ಸರ್ಕಾರ ಇದರ ಬಗ್ಗೆ ವಿಚಾರಣೆ ಮಾಡಿ ಕಾನೂನಿಗೆ ಸೂಕ್ತ ತಿದ್ದುಪಡಿ ತರಬೇಕಾಗುತ್ತದೆ ಎಂದು ಮನವರಿಕೆ ಮಾಡಿದೆವು. ಅಂದಿನಿಂದ ಇಂದಿನವರೆಗೆ ಅನೇಕ ಸಲ ಆ ಪ್ರಶ್ನೆ ಬಂದಿದೆ, ಧಾರವಾಡ ಜಿಲ್ಲೆಯ ರೈತರು ಹಾನಗಲ್‌ನಲ್ಲಿ ಹಗತಾಳ ಮಾಡಿದ್ದಾರೆ; ಮೆರವಣಿಗೆ ಹೋಗಿ ತಹಶೀಲ್ದಾರ್‌ಗೆ ಮೆಮೋರ್ಯಾಂಡಂ ಕೊಟ್ಟಿದ್ದಾರೆ. ಶ್ರೀ ಮಾನ್ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿದ್ದಾಗ ಅವರನ್ನು ಕಂಡು ಆಗಿರತಕ್ಕ ಅನ್ಯಾಯವನ್ನು ಹೇಳಿದ ಮೇಲೆ ವಸೂಲು ಮಾಡುವುದನ್ನು ತಡೆಹಿಡಿದರು. ನಾನು ಡಿ.ಸಿ.ಸಿ. ಮೀಟಿಂಗ್‌ನಲ್ಲೂ ಕೂಡ ಇದರ ಬಗ್ಗೆ ಹೇಳಿದ್ದೇನೆ, ಡೆಪ್ಯುಟಿ ಕಮಿಷನರ್‌ರವರೂ ಕೂಡ ವರದಿ ಕಳಿಸಿ ದ್ದಾರೆ. ಸುಮಾರು ಎರಡು ವಾರಗಳ ಹಿಂದೆ ನಾನು ತಮಗೆ ಒಂದು ಪತ್ರವನ್ನು ಬರೆದಿದ್ದೇನೆ. ಲೆವಿ, ವಾಟರ್ ರೇಟ್ ವಸೂಲು ಮಾಡುವುದು ಇಲ್ಲೀಗಲ್ ಎಂದು ಹೇಳಿದ್ದೇನೆ. ಅಧಿಕಾರಿಗಳಿಗೂ ಮನವರಿಕೆ ಮಾಡಿಕೊಟ್ಟಿದ್ದೇನೆ. ಈಗ ವಸೂಲು ಮಾಡುವುದು ಇಲ್ಲೀಗಲ್ ಆಗಿದೆ. ಹಿಂದೆ ಜಾಯಿಂಟ್ ಇನ್ಸ್‌ಪೆಕ್ಷನ್ ಮಾಡಬೇಕು ಎಂದು ಇತ್ತು, ಮಾಡಲಿಲ್ಲ. ಯಾವ ಕೆರೆಯಲ್ಲಿ ನೀರು ಬಂದಿದೆ. ಎಷ್ಟು ನೀರು ಕೊಟ್ಟಿದ್ದಾರೆ ಎಂದು ಇನ್ಸ್‌ಪೆಕ್ಷನ್ ಮಾಡಲಿಲ್ಲ. ಲೆವಿ ಬಾಕಿ ಇರತಕ್ಕ ಬಗ್ಗೆ ರ್ಯಾಷನಲ್ ಏನಿದೆ ಆ ವರದಿಯನ್ನು ಸರ್ಕಾರ ತರಿಸಿಕೊಂಡಿದೆ. ನನಗೆ ತಿಳಿದಮಟ್ಟಿಗೆ ರೆವಿನ್ಯು ಕಮಿಷನರ್ ಹತ್ತಿರ ರಿಪೋರ್ಟ್ ಬಂದಿದೆ. ಇದರ ಜೊತೆಗೆ ವೆಟರ್‌ಮೆಂಟ್ ಲೆವಿ ಬಗ್ಗೆ ನರಗುಂದ್, ನವಲ್‌ಗುಂದ್, ಸವದತ್ತಿ, ರಾಮದುರ್ಗ, ರೋಣ ತಾಲ್ಲೂಕುಗಳಲ್ಲಿ ನೋಟಿಸ್ ಕೊಟ್ಟರು. ಆ ನೋಟಿಸ್ ಎಲ್ಲಾ ಇಂಗ್ಲಿಷಿನಲ್ಲಿದೆ, ಕನ್ನಡದಲ್ಲಿ ಇಲ್ಲ. ಇಂಗ್ಲೀಷಿನಲ್ಲಿ ನೋಟೀಸ್ ಕೊಟ್ಟಿದ್ದಾರೆ ಜೊತೆಗೆ ಸಾಕಷ್ಟು ಸಮಯ ಕೊಟ್ಟಿಲ್ಲ. ಇದು ರೈತರಿಗೆ ಗೊತ್ತಾಗಲಿಲ್ಲ, ಆಬ್ಜಕ್ಷನ್ ಹಾಕಬೇಕಾಗಿತ್ತು, ಹಾಕಲಿಲ್ಲ. ಪಬಿಕ್ ಅಕೌಂಟ್ಸ್ ಕಮಿಟಿ ಛೇರ್ಮನ್ನಾಗಿ ನಾನು ಕೆಲವು ಪ್ರದೇಶಗಳನ್ನು ನೋಡಿದ್ದೇನೆ, ಕಮಿಟಿ ಸದಸ್ಯರನ್ನೂ ಕೂಡ ಕರೆದು ಕೊಂಡು ಹೋಗಿ ತೋರಿಸಿದ್ದೇನೆ, ರಿಪೋರ್ಟಿನಲ್ಲಿ ಎಲ್ಲಾ ವಿಷಯವಿದೆ. ಕೆಲವು ನೋಟಿಫಿಕೇಷನ್ ಗಳನ್ನು ಡಿಲೀಟ್ ಮಾಡಿದರು, ಕೆಲವು ಹಾಗೇ ಇದೆ. ಸಿವಿಲ್ ಕೋರ್ಟಿಗೆ ಅಪೀಲ್ ಮಾಡಲಿಲ್ಲ. ಎನ್ನುವ ಆಧಾರದ ಮೇಲೆ ಪುನಃ ವಸೂಲು ಮಾಡುತ್ತಿದ್ದಾರೆ. ಕಳೆದ ಎರಡು ವರ್ಷಗಳಿಂದ ಇದ್ದು ಬಗ್ಗೆ ಹೇಳುತ್ತಾ ಬಂದಿದ್ದೇನೆ. ಆಲೋಚನೆ ಮಾಡುತ್ತೇವೆ, ವಿಚಾರಣೆ ಮಾಡುತ್ತೇವೆ ಎಂದು ಸರ್ಕಾರ ದವರು ಹೇಳುತ್ತಾ ಬಂದಿದ್ದಾರೆ, ಪುನಃ ಸರ್ಕಾರ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳಬೇಕು. ಹೊಸ ನೀರಾವರಿ ಪ್ರದೇಶದಲ್ಲಿ ಕಾಲುವೆಗಳು ಸರಿಯಾಗಿಲ್ಲ ನೀರು ಭೂಮಿಗೆ ಮುಟ್ಟುತ್ತಾ ಇಲ್ಲ, ನೀರು ಕೊಚ್ಚಿಕೊಂಡು ಹೋಗುತ್ತಾ ಇದೆ, ಕಮ್ಯಾಂಡ್ ಏರಿಯಾ ಡೆವಲಪ್‌ಮೆಂಟಿನಲ್ಲಿ ನೀವು ನೋಡಿರ ಬೇಕು, ಭೂಮಿಯಲ್ಲಿ ಮಣ್ಣಿಲ್ಲದೆ ಕಿತ್ತುಕೊಂಡು ಹೋಗುತ್ತಾ ಇದೆ, ಬೆಳೆ ಇಲ್ಲ, ಕೆಲವು ಭೂಮಿಗೆ ನೀರು ಬರುತ್ತಾ ಇಲ್ಲ. ಮಾನ್ಯ ಪಾಟೀಲರು ಹೇಳಿದಹಾಗೆ ೧೦,೦೦೦ ಜನ ರೈತರು ಸತ್ಯಾಗ್ರಹ ಮಾಡಿದ್ದಾರೆ. ಧರಣಿ ಕೂತಿದ್ದಾರೆ. ಬೆಂಗಳೂರು ನಗರದಲ್ಲಿ ನೀರು ಸಿಕ್ಕದೇ ಹೋದರೆ ಗಲಾಟೆ ಮಾಡಿದರೆ ಸರ್ಕಾರ ಕೂಡಲೆ ಅಧಿಕಾರಿಗಳನ್ನು ಕಳಿಸಿ, ಕ್ರಮ ತೆಗೆದುಕೊಳ್ಳುತ್ತಾರೆ. ಇದು ಮಾನ್ಯ ಲಕ್ಷ್ಮೀಸಾಗರ್‌ರವರಿಗೆ

ಗೊತ್ತಿದೆ. ಆದರೆ ಬಹಭಾಗದ ರೈತರು ನೀರು ಸಿಕ್ಕದೆ ಭೂಮಿಯನ್ನು ಹಾಳುಮಾಡಿಕೊಂಡಿದ್ದಾರೆ. ಶ್ರೀಮಂತ ರೈತರ ಬಗ್ಗೆ ಕ್ರಮ ತೆಗೆದುಕೊಂಡಿಲ್ಲ. ಹಾನಗಲ್ ತಾಲ್ಲೂಕಿನ ೩೦೦೦ ಜನ ರೈತರಿಗೆ ವೆರ್ ಫ್ಯೂಚರ್ ನೋಟೀಸ್ ಕೊಟ್ಟಿದ್ದಾರೆ. ಅವರು ೧೦ ಸಲ ಸತ್ಯಾಗ್ರಹ ಮಾಡಿದ್ದಾರೆ. ಮಾನ್ಯ ಕಾಗೋಡು ತಿಮ್ಮಪ್ಪನವರು ಮತ್ತು ಮಾನ್ಯ ಬಂಗಾರಪ್ಪನವರೂ ಆಗ ಬಂದಿದ್ದರು.

ಶ್ರೀ ಎಸ್. ಬಂಗಾರಪ್ಪ.—ನನಗೆ ಗೊತ್ತಿಲ್ಲ, ನಾನು ಬರಲಿಲ್ಲ.

ಶ್ರೀ ಎಸ್. ಆರ್. ಬೊಮ್ಮಾಯಿ.—೧೯೬೯–೭೦ರಲ್ಲಿ ಟಿನೆನ್ಸಿ ಮೊಟಿಂಗಿಗೆ ತಾವು ಬಂದಿದ್ದಿರೋ ಇಲ್ಲವೊ ನನಗೆ ನೆನಪಿಲ್ಲ. ಈ ಆಗಿನಿಂದ ಈ ಪ್ರಶ್ನೆ ಬರುತ್ತಾ ಇದೆ. ಈಗ ಫರ್‌ಫ್ಯೂಚರ್ ನೋಟೀಸನ್ನು ಮೊನ್ನೆಮೊನ್ನೆ ತೆಗೆದಿದ್ದಾರೆ. ನನಗೆ ಅಧಿಕಾರಿಗಳು ಆಶ್ವಾಸನೆ ಕೊಟ್ಟಿದ್ದರು. ಮಲೆನಾಡು ಪ್ರದೇಶದಲ್ಲಿ ವಾಟರ್ ರೇಟ್ ಆರಿಯರ್ಸ್ ವಸೂಲಿ ಬಗ್ಗೆ ಪುನಃ ವಿಚಾರಣೆಮಾಡಿ ಕ್ರಮ ತೆಗೆದುಕೊಳ್ಳುತ್ತೇವೆ ಎಂದು ಅದು ಅಧಿಕಾರಿಗಳು ಆಶ್ವಾಸನೆ ಕೊಟ್ಟಿದ್ದರು, ಆದನ್ನು ಈ ಸಭೆಯಲ್ಲಿ ಹೇಳಬೇಕೋ ಬೇಡವೊ ಗೊತ್ತಿಲ್ಲ. ಇದರ ಬಗ್ಗೆ ಉತ್ತರ ಬರಲಿಲ್ಲ. ತಾವು ಇವತ್ತು ಅಧಿಕಾರಿಗಳ ಕಡೆಗೆ ಬಂದಂಥ ರಿಪೋರ್ಟನ್ನು ನೋಡಿ ಸರ್ಕಾರ ಕೋನೆ ನಿರ್ಣಯ ತೆಗೆದುಕೊಳ್ಳುವವರೆಗೆ ಹಣ ವಸೂಲು ಮಾಡುವುದನ್ನು ತಡೆಹಿಡಿಯಿರಿ. ಒಬ್ಬ ಅಧಿಕಾರಿಯನ್ನು ಮಲಪ್ರಭ ಭಾಗದ ನೀರಾವರಿ ಪ್ರದೇಶಕ್ಕೆ ಕಳಿಸಿಕೊಡಿ. ಇದರ ಬಗ್ಗೆ ಡಿವಿಜನಲ್ ಕಮಿಷನರ್ ಮತ್ತು ಡೆಪ್ಯೂಟಿ ಕಮಿಷನರ್ ರಿಪೋರ್ಟ್ ಮಾಡಿದ್ದಾರೆ. ಅದು ಅಲ್ಲಿಗೆ ನಿಂತು ಹೋಗುತ್ತದೆ. ಕೂಡಲೇ ಒಬ್ಬ ಅಧಿಕಾರಿಯನ್ನು ಅಲ್ಲಿಗೆ ಕಳಿಸಿ, ನಿಜ ಸ್ಥಿತಿ ತಿಳಿದುಕೊಂಡು ಯಾರು ನೀರು ತೆಗೆದುಕೊಂಡು ಲಾಭ ಪಡೆದಿದ್ದಾರೆ ಅವರಿಂದ ಹಣ ವಸೂಲಿ ಮಾಡಿ. ಯಾರ ಭೂಮಿಗೆ ನೀರು ಮುಟ್ಟಿಲ್ಲ ಅಂಥವರಿಂದ ವಸೂಲು ಮಾಡುವುದು ಹೆರಾಸ್‌ಮೆಂಟ್ ಆಗುತ್ತದೆ. ಕೂಡಲೇ ವಸೂಲು ಮಾಡುವುದನ್ನು ತಡೆಹಿಡಿಯಿರಿ. ತಾವು ಈ ಸಮಸ್ಯೆಯನ್ನು ಚೆನ್ನಾಗಿಅರಿತಿದ್ದೀರಿ. ಎನ್‌ಕ್ವೈರಿ ಮಾಡಿಸಿ ಕ್ರಮ ತೆಗೆದುಕೊಳ್ಳಿ ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಬಿ. ಚಿಮ್ಮನಕಟ್ಟಿ.—ಮಾನ್ಯ ಅಧ್ಯಕ್ಷರೇ, ಮಾನ್ಯ ಬಿ. ಆರ್. ಪಾಟೀಲರು ಎತ್ತಿರುವ ವಿಷಯ ಕೇವಲ ಧಾರವಾಡಕ್ಕೆ ಮಾತ್ರ ಸಂಬಂಧಪಟ್ಟಿದ್ದಲ್ಲ. ಮೇಲಾಗಿ ಬಿಜಾಪುರ ಜಿಲ್ಲೆಯ ರೈತರೂ ಸಹ ಈ ಸಮಸ್ಯೆಯನ್ನು ಎದುರಿಸಬೇಕಾದ ಪರಿಸ್ಥಿತಿ ಬಂದಿದೆ. ಈಗ ಮಾನ್ಯ ಸ್ನೇಹಿತರು ನರಗುಂದ, ರೋಣ್ ಮುಂತಾದ ತಾಲ್ಲೂಕಿನ ರೈತರ ಗೋಳನ್ನು ಹೇಳುತ್ತಿದ್ದಾರೆ. ಮೂಲ ಸಮಸ್ಯೆ ಏನೆಂದರೆ, ನರಗುಂದ, ನವಿಲಗುಂದ ರೋಣ್ ತಾಲ್ಲೂಕುಗಳಲ್ಲಿ ವಾಟರ್ ಟ್ಯಾಕ್ಸ್‌ನ್ನು ವಸೂಲು ಮಾಡುತ್ತಿದ್ದಾರೆ ಎಂದು ಹೇಳುತ್ತಿದ್ದಾರೆ. ಅವರು ನಿಜವಾಗಲೂ ಕೂಡ ೧೯೭೬ನೇ ಇಸವಿಯಿಂದ ನೀರನ್ನು ತೆಗೆದುಕೊಂಡಿದ್ದಾರೆ. ಸರ್ಕಾರದವರು ವಸೂಲು ಮಾಡುತ್ತಾ ಇರತಕ್ಕಂಥಾದ್ದು ೧೯೭೪ನೇ ಇಸವಿಯಿಂದ. ಆ ಕೆಲಸ ಯಾವಾಗ ಪ್ರಾರಂಭವಾಯಿತೋ, ಆ ಕೆಲಸ ಪ್ರಾರಂಭವಾದ ದಿವಸದಿಂದಲೂ ವಸೂಲಿ ಮಾಡುತ್ತಿದ್ದಾರೆ. ಇದರಿಂದ ರೈತರಿಗೆ ಬಹಳ ಅನ್ಯಾಯವಾಗಿದೆ. ಅವರು ಯಾವಾಗ ನೀರನ್ನು ತೆಗೆದುಕೊಂಡರೋ, ಯಾವಾಗ ನೀರನ್ನು ಸದುಪಯೋಗ ಪಡಿಸಿಕೊಂಡರೋ ಆವಾಗಿನಿಂದ ಕರವನ್ನು ಕೊಡುವುದಕ್ಕೆ ರೈತರು ಸಿದ್ಧರಿದ್ದಾರೆ ಆದರೆ ಅನ್ಯಾಯವಾಗಿ ಸರ್ಕಾರದವರು ಇದನ್ನು ಸರಿಯಾಗಿ ಪರಿಶೀಲನೆ ಮಾಡದೇ, ರೈತರು ನಿಜವಾಗಿಯೂ ನೀರನ್ನು ತೆಗೆದುಕೊಂಡಿದ್ದಾರೋ ಇಲ್ಲವೋ ಎನ್ನುವುದನ್ನು ವಿಚಾರಣೆ ಮಾಡದೇ ಕರವನ್ನು ಹಾಕುತ್ತಿರುವುದು ದೊಡ್ಡ ತಪ್ಪಾಗುತ್ತದೆ. ಇಷ್ಟೇ ಅಲ್ಲಾ ಕೆಲವು ಕಡೆ ಬಾದಾಮಿ ತಾಲ್ಲೂಕಿನ ಬಡವಟ್ಟಿ, ಬಾಂದ್ರು, ಕರೆ, ಕಿಟ್ಟಿ ಗ್ರಾಮದಲ್ಲಿ ಎರಡು ಅದರಲ್ಲೂ ಬಾಂದ್ರಾದಲ್ಲಿ ಎರಡು ವರ್ಷಗಳಿಂದ ರಿಪೇರಿ ಕಾರ್ಯಕ್ರಮ ನಡೆಯುತ್ತಿದೆ. ರೈತರಿಗೆ ನೀರಿನ ಉಪಯೋಗವಾಗಿಲ್ಲ. ಆದರೂ ಸಹ ನೀರನ್ನು ತೆಗೆದುಕೊಂಡಿದ್ದಾರೆಂದು ವಸೂಲಿ ಕ್ರಮವನ್ನು ಜರುಗಿಸುತ್ತಿದ್ದೀರಿ ಆದುದರಿಂದ ಇದರ ಬಗ್ಗೆ ಸಹ ಸರಿಯಾಗಿ ಪರಿಶೀಲನೆ ಮಾಡಿ ಸೂಕ್ತ ಕಾರ್ಯಕ್ರಮವನ್ನು ತೆಗೆದುಕೊಂಡು ಅವರಿಗೂ ಸಹ ರಿಯಾಯಿತಿ ಯನ್ನು ಕೊಡಬೇಕೆಂದು ಹೇಳುತ್ತೇನೆ. ಮೇಲಾಗಿ ಈ ಕಾಯಿದೆಗಳಿಗೆ ಕೆಲವು ತಿದ್ದುಪಡಿಗಳನ್ನು ತರಬೇಕಾಗಿದೆ ಏಕೆಂದರೆ ನೀರಾವರಿ ಪ್ರದೇಶದೊಳಗೆ ಬರತಕ್ಕ ರೈತರು ಏನಿದ್ದಾರೆ ಅವರು ನಿಜವಾಗಿಯೂ ಕೂಡ ನೀರನ್ನು ಉಪಯೋಗಿಸಲೇಬೇಕು ನಿಜ ಆದರೂ ಕೂಡ ಕೆಲವು ಕಡೆ ನೀರನ್ನು ಉಪಯೋಗಿಸದೇ ಇರತಕ್ಕಂಥ ಪರಿಸ್ಥಿತಿ ಕೂಡ ಇದೆ. ಆದುದರಿಂದ ಮಾನ್ಯ ಶ್ರೀ ಬಿ. ಆರ್. ಪಾಟೀಲ್ ರವರು ಹೇಳಿದ ಹಾಗೆ ಈ ಎಲ್ಲ ವಿಷಯಗಳ ಬಗ್ಗೆ ಸಮಗ್ರವಾಗಿ ಪರಿಶೀಲನೆ ಮಾಡಿ ಬೆಟರ್‌ಮೆಂಟ್ ಲೆವಿ ಯನ್ನು ಮತ್ತು ವಾಟರ್ ರೇಟನ್ನು ಯೋಗ್ಯ ರೀತಿಯಲ್ಲಿ ಹಾಕುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ವಿ. ಎಸ್. ಕೌಜಲಗಿ (ಅರಬಾಗಿ).— ಸ್ವಾಮಿ, ಇದು ಮಲಪ್ರಭಾದ ಯೋಜನೆ ಅಷ್ಟಕ್ಕೇ ಮಾತ್ರ ಒಳಪಡುವುದಿಲ್ಲ ಘಟಪ್ರಭಾ ಯೋಜನೆಯ ವ್ಯಾಪ್ತಿಯೊಳಗೆ ಬರತಕ್ಕ ಜಮೀನುಗಳೇನಿವೆ ಅವು ಗಳಿಗೂ ಸಹ ಇದು ಅನ್ವಯವಾಗುವುದರಿಂದ ಇದರ ಬಗ್ಗೆ ಪುನಃ ಪರಿಶೀಲನೆ ಮಾಡಿ ಯೋಗ್ಯ ರೀತಿಯಲ್ಲಿ ವಸೂಲಿ ಕ್ರಮವನ್ನು ತೆಗೆದುಕೊಳ್ಳುವ ಬಗ್ಗೆ ವ್ಯವಸ್ಥೆ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ಇದು ಹಲವಾರು ವರ್ಷಗಳಿಂದ ನೆನಗುದಿಗೆ ಬಿದ್ದಿರತಕ್ಕ ವಿಷಯ ಎನ್ನುವುದನ್ನು ಒಪ್ಪುತ್ತೇನೆ. ಇದು ಮಲೆನಾಡು ಬಯಲು ಸೀಮೆ ಭಾಗಕ್ಕೆ ಸೇರಿರ ತಕ್ಕ ವಿಚಾರವೆಂದು ನೋಡಿ ವಿಚಾರ ಮಾಡತಕ್ಕದ್ದಲ್ಲ ಏತಕ್ಕೆಂದರೆ ಮಲೆನಾಡಿನಲ್ಲಿಯೂ ಸಹ ಸಾವಿರಾರು ಎಕರೆಗಳು ಇದ್ದಾವೆ. ಬಯಲು ಸೀಮೆಗಳಲ್ಲೂ ಬೇಕಾದಷ್ಟು ಕೆರೆಗಳು ಇದ್ದಾವೆ. ಅದು ಮಲಪ್ರಭಾ, ಘಟಪ್ರಭಾ, ಇಲ್ಲವೇ ಅಪ್ಪರ್ ಕೃಷ್ಣಾ, ತುಂಗಭದ್ರ ಯೋಜನೆ ಕೆಳಗೆ ಬರತಕ್ಕಂಥದ್ದು ಯಾವುದೇ ಇರಲಿ ಕಾನೂನು ಮಾತ್ರ ಈ ವೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟನ್ನು ಹಾಕತಕ್ಕದರ ಬಗ್ಗೆ ಒಂದೇ ಆಗಿದೆ. ಕೆಲವು ಕಡೆ ಮಾನ್ಯ ಸದಸ್ಯರುಗಳು ಹೇಳಿದ ಹಾಗೆ ಆಗಿದೆ ನಾನು ಸಹ ಕೆಲವು ಕಡೆ ಹೋಗಿ ನೋಡಿದ್ದೇನೆ ನಿಜ. ಆದರೆ ನಾವು ಈ ಯೋಜನೆಗಳಿಗೆ ಕೋಟಿ ಕೋಟಿ ಹಣವನ್ನು ಎಲ್ಲಿಂದ ತರಬೇಕು ಎನ್ನುವ ಪ್ರಶ್ನೆ ಬರುತ್ತದೆ. ನಾವು ಪ್ರಪಂಚದ ಬ್ಯಾಂಕ್‌ನವರಿಂದ ಸಾಲವನ್ನು ತೆಗೆದುಕೊಂಡು ಬಂದಿರುತ್ತೇವೆ ಇಲ್ಲವೇ ಕೇಂದ್ರ ಸರ್ಕಾರದವರಿಂದ ಸಾಲ ತೆಗೆದುಕೊಂಡು ಬಂದಿರುತ್ತೇವೆ ಅವರಿಗೆ ಸರಳ ಬಡ್ಡಿಯ ಜೊತೆಗೆ ಅಸಲನ್ನು ಸಹ ಕಂತುಗಳಲ್ಲಿ ಹಿಂದಿರುಗಿಸಿ ಕೊಡಬೇಕಾಗಿರುತ್ತದೆ. ಆ ರೀತಿ ನಾವು ಹಿಂದಿರುಗಿಸಬೇಕಾದರೆ ಹಣ ಎಲ್ಲಿಂದ ಬರಬೇಕು ? ಆದಕ್ಕೆ ಯಾರು ಈ ಯೋಜನೆಯಿಂದ ನೀರಿನ ಉಪ ಯೋಗವನ್ನು ಪಡೆದುಕೊಳ್ಳುತ್ತಾರೆಯೋ ಅವರಿಂದ ವಸೂಲಿ ಮಾಡಬೇಕಾಗುತ್ತದೆ. ಆದರೆ ನಿಜವಾ ಗಿಯೂ ಯಾರು ನೀರನ್ನು ಉಪಯೋಗ ಮಾಡುತ್ತಿಲ್ಲವೋ ಅಥವರಿಂದ ವಸೂಲಿ ಮಾಡುವುದು ಸರಿ ಯಲ್ಲವೆಂದು ಮಾನ್ಯ ಸದಸ್ಯರುಗಳ ಅಭಿಪ್ರಾಯವಾಗಿದೆ. ಅದು ಒಪ್ಪುತ್ತೇನೆ. ಕೆಲವು ಯೋಜನೆಗಳ ಟೇಲ್ ಎಂಡ್‌ನಲ್ಲಿರತಕ್ಕವರು ಯಾರಿದ್ದಾರೆ ಅವರಿಗೆ ಕೆಲವೊಮ್ಮೆ ನೀರೇ ತಲುಪಿರುವುದಿಲ್ಲ. ಅದನ್ನು ನಾನು ಲೋಕೋಪಯೋಗಿ ಸಚಿವನಾಗಿದ್ದಾಗ ಖುದ್ದಾಗಿ ನವಲುಗುಂದ ರೋಣ, ತಾಲ್ಲೂಕಿನ ಭಾಗ ಗಳಿಗೆ ಹೋಗಿದ್ದಾಗ ನೋಡಿಕೋಡಿಕೊಂಡು ಬಂದಿದ್ದೇನೆ ನೋಡಿಕೊಂಡು ಬಂದು ಆಗಿದ್ದ ಶ್ರೀ ದೇವರಾಜ್‌ಅರಸ್, ಮುಖ್ಯಮಂತ್ರಿಗಳವರಿಗೆ ತಿಳಿಸಿ ಚರ್ಚೆ ಮಾಡಿದ್ದೆವೆ. ಇದು ಏನಾಗಿರುತ್ತದೆ ಎಂದರೆ ನಾವು ಇಷ್ಟನೇ ತಾರೀಖಿನೊಳಗೆ ಇಷ್ಟು ನೀರನ್ನು ಬಿಡಬೇಕೆಂದು ಮಾಡಿ ರಿಕಾರ್ಡ್‌ಮಾಡಿ ಬಿಟ್ಟಿರುತ್ತಾರೆ. ಇಷ್ಟು ಸರ್ವೆ ನಂಬರ್ ವರೆಗೆ ನೀರು ಹೋಗಬೇಕು ಎನ್ನುವ ಬಗ್ಗೆ ಮಾಡಿ ಬಿಟ್ಟಿರು ತ್ತಾರೆ. ಆದರೆ ಈ ಮಧ್ಯದಲ್ಲಿ ಕಾಮಗಾರಿಗಳ ಕೆಲಸದಿಂದ ನಿರ್ದಿಷ್ಟ ಪಡಿಸಿದ ದಿವಸಗಳಲ್ಲಿ ಅವರಿಗೆ ನೀರೇ ತಲುಪಿರುವುದಿಲ್ಲ. ಲೆಕ್ಕದ ಪ್ರಕಾರವೇನೋ ಚಾನಲ್‌ಗಳಲ್ಲಿ ನೀರು ಬಿಟ್ಟು ಬಿಟ್ಟಿರುತ್ತೇವೆ. ಆದರೆ ಸಬ್ ಚಾನಲ್‌ಗಳಲ್ಲಿ ನೀರು ಹೋಗಿ ಟೇಲ್ ಎಂಡ್‌ನಲ್ಲಿರತಕ್ಕವರಿಗೆ ತಲುಪಿರುವುದಿಲ್ಲ, ಎರಡನೆ ಯದಾಗಿ ಏನಾಗಿದೆಯೆಂದರೆ ಎಗ್ಜಿಕ್ಯುಟಿವ್ ಇಂಜನಿಯರ್‌ರವರು, ಮತ್ತು ರೆವಿನ್ಯೂ ಕಮಿಷನರ್‌ರವರು ಖುದ್ದಾಗಿ ಅನೇಕಕಡೆಗಳಲ್ಲಿ ಹೋಗಿನೋಡದೇ ವರದಿಯನ್ನು ಕೊಟ್ಟಿದ್ದಾರೆ ಆವರದಿ ಸರಿಯಲ್ಲ ಎನ್ನುವ ಅಭಿಪ್ರಾಯ ಕೂಡ ಇದೆ. ಆದುದರಿಂದ ಏತನ್ಮಧ್ಯೆ ರೆವಿನ್ಯೂ ಕಮಿಷನರ್‌ರವರ ರಿಪೋರ್ಟ್ ಈ ಮಲಪ್ರಭಾ,ಘಟಪ್ರಭಾ ವಿಷಯದಬಗ್ಗೆ ಏನು ವರದಿಯನ್ನು ಕೊಟ್ಟಿದ್ದಾರೆ ಅದನ್ನು ಸಹ ನಾವು ನೋಡಿ ತೀರ್ಮಾನಕ್ಕೆ ಬರಬೇಕಾಗುತ್ತದೆ. ಮತ್ತೆ ಈಗ ಏನು ನೀರನ್ನು ಉಪಯೋಗಿಸಿ ಕೊಂಡಿರತಕ್ಕ ಶಕ್ತಿ ಮಂತ ರೈತರಿಂದ ವಸೂಲಿ ಮಾಡಲು ಯಾರದೂ ಭಿನ್ನಾಭಿಪ್ರಾಯವಿಲ್ಲ. ಅದನ್ನು ಎಲ್ಲರೂ ಒಪ್ಪಲೇ ಬೇಕಾಗುತ್ತದೆ. ಆದರೆ ಯಾರು ನೀರನ್ನು ಉಪಯೋಗಿಸದೇ ಇರುವವರಿದ್ದಾರೆ, ಮತ್ತು ಶಕ್ತಿಹೀನರಿ ದ್ದಾರೆ ಅಂಥವರಿಗೆ ಕಾಲಾವಕಾಶ ಕೊಡಬೇಕಾಗಿತ್ತು. ಮತ್ತು ನ್ಯಾಯಯುತವಾಗಿ ನೀರನ್ನು ಉಪ ಯೋಗಿಸದೇ ಇರುವವರ ವೇಲೆ ವಸೂಲಿ ಕ್ರಮವನ್ನು ಕೈಗೊಳ್ಳಬಾರದಿತ್ತು ಎಂದು ಮಾನ್ಯ ಶ್ರೀ ಬೊಮ್ಮಾಯಿ ರವರು ಹೇಳಿದರು.

ಶ್ರೀ ಎಸ್. ಆರ್. ಬೊಮ್ಮಾಯಿ.—ಶ್ರೀಮಂತ ರೈತರು ಎಂದರೆ ಈಗ ಒಬ್ಬ ರೈತರಿಗೆ ೩೦,೨೫ ಎಕರೆ ಜಮೀನಂ ಇರುತ್ತದೆ ಆದರಲ್ಲಿ ೫ ಎಕರೆಗೆ ಮಾತ್ರ ನೀರು ಬಿಟ್ಟು ಬಾಕಿ ೨೫.೩೦ ಎಕರೆ ಪೂರ್ತಿಗೂ ಹಣ ವಸೂಲಿ ಕ್ರಮ ನಡೆಯುತ್ತಿದೆ ಇದು ತಪ್ಪು. ಆದುದರಿಂದ ನೀರನ್ನು ಎಷ್ಟು ಎಕರೆಗೆ ಬಿಟ್ಟಿರು ತ್ತಾರೋ ಅಷ್ಟು ಎಕರೆಗೆ ಮಾತ್ರ ಹಣ ವಸೂಲಿ ಮಾಡತಕ್ಕದ್ದು ಸೂಕ್ತವೆಂದು ನಮ್ಮ ಅಭಿಪ್ರಾಯ.

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಸದಸ್ಯರು ಹೇಳಿದ ಹಾಗೆ ಎಷ್ಟು ಎಕರೆಗೆ ನೀರನ್ನು ಉಪಯೋಗ ಮಾಡಿಕೊಂಡಿರುತ್ತಾರೋ ಅಷ್ಟು ಎಕರೆಗೆ ಮಾತ್ರ ಹಣವನ್ನು ವಸೂಲಿ ಮಾಡಬೇಕಾಗುತ್ತದೆ. ಪೂರ್ತಿಗೂ ವಸೂಲಿ ಮಾಡುವುದಕ್ಕಾಗುವುದಿಲ್ಲ ಅದನ್ನು ಒಪ್ಪುತ್ತೇನೆ. ೫ ಎಕರೆಗೆ ಮಾತ್ರ ಉಪಯೋಗಿಸಿದ್ದರೆ ಅಷ್ಟಕ್ಕೆ ಮಾತ್ರ ಹಾಕಬೇಕಾಗುತ್ತದೆ. ಆದುದರಿಂದ ಅಧ್ಯಕ್ಷರೇ ಈ ಎಲ್ಲಾ ವಿಷಯಗಳ ಬಗ್ಗೆ ನಾನು ಮುಖ್ಯಮಂತ್ರಿಗಳ ಹತ್ತಿರ ಮಾತನಾಡುತ್ತೇನೆ ಮತ್ತೆ ರವಿನ್ಯೂ ಕಮಿಷನರ್ ರವರೇನು ವರದಿಯನ್ನು ಕೊಟ್ಟಿದ್ದಾರೆಅದನ್ನೂ ಗಮನದಲ್ಲಿಟ್ಟುಕೊಂಡು ವಿಚಾರ ಮಾಡುತ್ತೇನೆ. ಮತ್ತು ನೀರನ್ನು ಉಪಯೋಗಿಸದೇ ಇರುವವರಿಗೆ ಹಾಕುವುದಿಲ್ಲ, ಇದರ ಬಗ್ಗೆ ಹಿಂದಿನ ಮಂತ್ರಿಮಂಡಲದವರೇನು ಅಭಿಪ್ರಾಯವನ್ನು ವ್ಯಕ್ತಪಡಿಸಿದ್ದರೋ ಅದನ್ನೇ ಈ ಸದನದಲ್ಲೂ ಹೇಳಬಯಸುತ್ತೇನೆ. ಯಾರಿಗೆ ನಿಜವಾಗಿ ನೀರು ಹೋಗಿಲ್ಲ ಅಂಥವರಿಗೆ ಬೆಟರ್‌ಮೆಂಟ್ ಲೆವಿಯಾಗಲೀ ವಾಟರ್ ರೇಟ್‌ನ್ನಾಗಲೀ ಹಾಕಬೇಕು ಎನ್ನುತಕ್ಕದ್ದನ್ನು ನಾನು ಪ್ರತಿ ಪಾದನೆ ಮಾಡುವುದಿಲ್ಲ. ಅದು ಅನ್ಯಾಯ ವಾಗುತ್ತದೆ. ಆದರೆ ಯಾರು ನೀರನ್ನು ತೆಗೆದುಕೊಂಡಿದ್ದಾರೆ ಅವರು ಕೊಡತಕ್ಕಂಥ ಜವಾಬ್ದಾರಿಯನ್ನು ಆ ಜನ ಹೊರಲೇಬೇಕಾಗುತ್ತದೆ. ಆ ರೀತಿ ಕೊಡದಿದ್ದರೆ ಯಾವುದೇ ಸರ್ಕಾರ ಅಧಿಕಾರಕ್ಕೆ ಬಂದರೂ ಸಹ ಈ ಯೋಜನೆಗಳನ್ನು ಮಾಡುವುದಕ್ಕಾಗುವುದಿಲ್ಲ. ಇದು ಎಲ್ಲರಿಗೂ ಗೊತ್ತಿರತಕ್ಕ ವಿಚಾರವೇ ಆಗಿದೆ. ನವಲಗುಂದ, ಸವದತ್ತಿ, ರೋಣ ಮುಂತಾದ ಭಾಗದವರು ೧೦, ೧೫ ಸಾವಿರ ಜನ ಇವತ್ತು ಸತ್ಯಾಗ್ರಹದಲ್ಲಿ ಪಾಲ್ಗೊಂಡಿದ್ದಾರೆಂದು ಮಾನ್ಯ ಶ್ರೀ ಬಿ. ಆರ್. ಪಾಟೀಲ್ ರವರು ಇಲ್ಲಿ ಹೇಳಿದರು ಅದು ಸರ್ಕಾರದವರ ಗಮನಕ್ಕೂ ಬಂದಿದೆ. ನನ್ನ ಹತ್ತಿರ ಕೂಡ ಮಾನ್ಯ ಸದಸ್ಯರು ಫೋನ್‌ನಲ್ಲಿ ಮಾತನಾಡಿ ಪತ್ರ ಕೂಡ ಬರೆದು ಸದನದಲ್ಲೂ ಕೂಡ ರೈಜ್ ಮಾಡುತ್ತೇವೆಂದು ಹೇಳಿದ್ದಾರೆ. ಸತ್ಯಾಗ್ರಹದ ಬಗ್ಗೆ ಕೂಡ ಇಲ್ಲಿ ಹೇಳಿದ್ದಾರೆ.

11-00 A.M.

೫ ಜನರಿರಲಿ, ೧೦ ಜನರಿರಲಿ, ಎಷ್ಟೇ ಜನರಿರಲಿ, ಆ ಪ್ರಶ್ನೆ ಬೇರೆ. ನ್ಯಾಯವಾದ ಬೇಡಿಕೆಗಳಿದ್ದರೆ ಅವುಗಳನ್ನು ಪರಿಶೀಲನೆ ಮಾಡುವುದಕ್ಕೆ ಸರ್ಕಾರ ಹಿಂದೇಟು ಹಾಕುವುದಿಲ್ಲ. ಈಗ ವರದಿ ಏನು ಬಂದಿದೆ ಅದನ್ನು ಸಹ ಪರಿಶೀಲನೆ ಮಾಡಿ ಮಾನ್ಯ ಮುಖ್ಯ ಮಂತ್ರಿಗಳೊಡನೆ ಚರ್ಚೆ ಮಾಡಿ ತೀರ್ಮಾನ ಮಾಡುತ್ತೇವೆ. ವಸೂಲಾತಿ ಬಗ್ಗೆ ಮಾತ್ರ ನಾವು ಭರದಿಂದ ಹೋಗುತ್ತಿದ್ದೇವೆಂದು ಹೇಳುತ್ತಿದ್ದೇನೆ. ಶಕ್ತಿವಂತ ಜನರೂ ಕೂಡ ನೀರನ್ನು ಉಪಯೋಗಿಸಿಕೊಂಡಿದ್ದಾರೆಂಬುದನ್ನು ಮಾನ್ಯ ಬಿ.ಆರ್. ಪಾಟೀಲರು ತಿಳಿದುಕೊಂಡಿರಬೇಕು. ಬಡವರಾಗಲೀ, ಶ್ರೀಮಂತರಾಗಲೀ, ನೀರನ್ನು ಪಡೆದವರೆಲ್ಲರೂ ಕಾನೂನು ಪ್ರಕಾರ ತೆರಿಗೆಯನ್ನು ಕೊಡಲೇಬೇಕು. ಆದರೆ ಅಲ್ಲಿ ಬಡವರಿಗೆ ಅನ್ಯಾಯವಾಗಿದೆ ಎಂಬ ಮಾತು ಬರುವುದು ಒಳ್ಳೆಯದಲ್ಲ. ನಾವು ಅಲ್ಲಿ ಭೇದಭಾವಗಳನ್ನು ಇಟ್ಟುಕೊಂಡು ನೋಡುವುದಿಲ್ಲ. ಯಾರು ನೀರನ್ನು ಪಡೆದಿದ್ದಾರೋ ಅವರು ಹಣ ಕೊಡುವುದಕ್ಕೆ ವ್ಯವಸ್ಥೆ ಮಾಡಿ, ಯಾರಿಗೆ ನೀರು ಬಂದಿಲ್ಲವೋ ಅದನ್ನು ಸರ್ಕಾರ ವಿಚಾರ ಮಾಡುತ್ತದೆ. ಅಲ್ಲಿ ಯಾರಿಗೆ ನೀರು ಸಿಕ್ಕಿಲ್ಲ ಯಾರು ಬಡವರಿದ್ದಾರೆ ಎಂಬುದನ್ನೆಲ್ಲ ವರದಿ ನೋಡಿ ಪರಿಶೀಲನೆ ಮಾಡಿ ನಂತರ ಹೇಗೆ ಮಾಡಬೇಕೆಂಬ ಬಗ್ಗೆ ಜಿಲ್ಲಾಧಿಕಾರಿಗಳಿಗೆ ಇವತ್ತೇ ಆದೇಶ ಕೊಡುತ್ತೇವೆ. ಶಕ್ತಿವಂತರು ಹಣ ಕೊಡಲೇಬೇಕು. ಇದಕ್ಕಿಂತ ಇನ್ನು ಬೇರೆ ಯಾವ ರೀತಿಯಲ್ಲೂ ಹೇಳಿಕೆ ಕೊಡುವುದಕ್ಕಾಗುವುದಿಲ್ಲ. ಒಂದು ವೇಳೆ ಕೊಟ್ಟರೆ ಮುಂದಿನ ಪ್ರಶ್ನೆಗೆ ತೊಂದರೆಯಾಗುತ್ತದೆ. ಮಲೆನಾಡು ಕೆರೆಗಳಲ್ಲಿ ತೊಂದರೆಯಾಗಿರತಕ್ಕ ವಿಷಯ ಸರ್ಕಾರದ ಗಮನದಲ್ಲಿದೆ. ಅಲ್ಲಿ ಹೂಳು ತುಂಬಿರತಕ್ಕ ಕೆರೆಗಳು ಇವೆ. ಅಂಥ ಕಡೆ (ನೀರು ಹೋಗದೆ ಇರುವ ಕಡೆ) ಕೂಡ ತೆರಿಗೆ ಹಾಕಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಅದನ್ನು ಕೂಡ ಸರ್ಕಾರ ಪರಿಶೀಲನೆ ಮಾಡುವುದಕ್ಕೆ ಸಿದ್ಧವಾಗಿದೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಮಾನ್ಯ ಕಂದಾಯ ಮಂತ್ರಿಗಳ ಹೇಳಿಕೆಯು ಕೆಲವು ಭಾಗಗಳನ್ನು ಮೆಚ್ಚುತ್ತೇನೆ. ಶ್ರೀಮಂತ ರೈತರು ಕೊಡಬೇಕೆಂಬುದರಲ್ಲಿ ಏನು ವಕಾಲತ್ತು ವಹಿಸುವುದಿಲ್ಲ. ಆದರೆ ನೀರು ಕೊಡದೇ ಇದ್ದರೂ ತೆರಿಗೆ ಕೊಡಬೇಕೆಂಬುದು ಸಮಂಜಸವಲ್ಲ. ಆ ಭಾಗದ ರೈತರು ಇದನ್ನೆಲ್ಲ ಗಮನಿಸಿ ವರದಿಯನ್ನು ನೋಡಿ ಕಾನೂನು ಪ್ರಕಾರ ತೆರಿಗೆ ವಸೂಲಾಗುತ್ತಿಲ್ಲವೆಂದು ಪ್ರಶ್ನೆಯನ್ನು ಕೂಡ ಎತ್ತಿದ್ದಾರೆ. ಆದ್ದರಿಂದ ಇಲ್ಲಿ ಕಾನೂನನ್ನು ತಿದ್ದುಪಡಿ ಮಾಡತಕ್ಕ ಪ್ರಶ್ನೆ ಬರುತ್ತದೆ. ಆದಕಾರಣ, ನಾವು ಈ ಬಗ್ಗೆ ಸಮಗ್ರವಾಗಿ ವರದಿಯನ್ನು ಪರಿಶೀಲನೆ ಮಾಡಿ ಮಾನ್ಯ ಮುಖ್ಯ ಮಂತ್ರಿ

ಗಳೊಡನೆ ಚರ್ಚೆ ಮಾಡಿ ನಾಳೆ ನಾಡಿದ್ದರಲ್ಲಿ ಹೇಳಿಕೆ ಕೊಡಿ. ಇವತ್ತಿನ ದಿವಸ ವಸೂಲಿ ಕ್ರಮಗಳನ್ನು ಬಿಗಿಯಾಗಿ ಮಾಡಿ ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತಿದ್ದಾರೆ, ರೈತರ ಮನೆಗಳ ಜಪ್ತಿ ಮಾಡುವ ಕ್ರಮಗಳೂ ಕೂಡ ನಡೆದಿವೆ. ಆ ವಿಚಾರ ಸತ್ಯಾಗ್ರಹ ಮಟ್ಟಕ್ಕೆ ಹೋಗಬೇಕಾದರೆ ಅಲ್ಲಿ ಏನೋ ತೊಂದರೆ ಇದ್ದೇ ಇದೆ ಎಂಬುದನ್ನು ಗಮನಿಸಬೇಕಾಗುತ್ತದೆ. ಅಲ್ಲಿ ಒಬ್ಬರಿಬ್ಬರು ಶ್ರೀಮಂತರು ಇರ ಬಹುದು. ಒಟ್ಟಿನಲ್ಲಿ, ಸಮಗ್ರ ಪ್ರಶ್ನೆಯನ್ನು ತನಿಖೆ ಮಾಡುವವರೆಗೆ ವಸೂಲಿ ಕ್ರಮವನ್ನು ತಡೆ ಹಿಡಿಯಿರಿ ಎಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಈಗ ಮಾನ್ಯ ಸದಸ್ಯರು ಕಾಯಿದೆ ತಿದ್ದುಪಡಿಯಾಗಬೇಕೆಂಬ ಅಭಿ ಪ್ರಾಯವನ್ನು ಹೇಳಿದ್ದಾರೆ. ಅದನ್ನು ನಾನು ಸಂಪೂರ್ಣವಾಗಿ ಒಪ್ಪುತ್ತೇನೆ, ಅದನ್ನು ವಿಚಾರ ಮಾಡ ಬಹುದು. ಮಾನ್ಯ ಚಿಮ್ಮನಕಟ್ಟಿಯವರು ಕೂಡ ಇದೇ ಮಾತನ್ನು ಹೇಳಿದ್ದಾರೆ. ಜೊತೆಗೆ ಮಾನ್ಯ ಕೌಜಲಗಿಯವರು ಘಟಪ್ರಭಾ ಭಾಗದಲ್ಲಿ ಕೂಡ ಇದೇ ರೀತಿಯಾಗಿದೆ ಎಂದೂ ಹೇಳಿದ್ದಾರೆ, ಅದನ್ನು ಕೂಡ ವಿಚಾರ ಮಾಡುತ್ತೇವೆ. ನಾಳೆ ನಾಡಿದ್ದರಲ್ಲಿ ಹೇಳಿಕೆ ಕೊಡುತ್ತೇನೆಂದು ಹೇಳುವುದಕ್ಕಾಗುವುದಿಲ್ಲ. ಏಕೆಂದರೆ, ಸಂಪೂರ್ಣ ವರದಿಯನ್ನು ನೋಡಿ ವಿಚಾರ ಮಾಡಬೇಕಾಗುತ್ತದೆ. ಈ ಸಂದರ್ಭದಲ್ಲಿ ಇಷ್ಟು ಮಾತ್ರ ಹೇಳಬಲ್ಲೆ, ಇದನ್ನೆಲ್ಲ ಸಮಗ್ರವಾಗಿ ಪರಿಶೀಲನೆ ಮಾಡಬೇಕಾದರೆ ತಾಂತ್ರಿಕ ಪರಿಜ್ಞಾನವುಳ್ಳವರ ಸಹಾಯ ಮತ್ತು ಆಡಳಿತ ವರ್ಗದ ಸಹಾಯ ಕೂಡ ಬೇಕಾಗುತ್ತದೆ. ಇದಕ್ಕೆ ತಮ್ಮ ಅಭಿಪ್ರಾಯ ಏನಿದೆ ಅದರ ಜೊತೆಗೆ ಎಲ್ಲ ಮಾನ್ಯ ಸದಸ್ಯರುಗಳೂ ತಮ್ಮ ತಮ್ಮ ಅಭಿಪ್ರಾಯಗಳನ್ನು ಕೊಡಲಿ ಮತ್ತು ಸಾರ್ವ ಜನಿಕರೂ ಕೂಡ ತಮ್ಮ ಅಭಿಪ್ರಾಯಗಳನ್ನು ಕೊಡಲಿ. ಅವನ್ನೆಲ್ಲ ಸಮಗ್ರವಾಗಿ ವಿಚಾರ ಮಾಡಿ ಈ ಆಯವ್ಯಯ ಅಧಿವೇಶನ ಮುಗಿಯುವುದರೊಳಗೆ ನಾನು ಹೇಳಿಕೆಯನ್ನು ಕೊಡುತ್ತೇನೆ. ಮಾನ್ಯ ಬಿ.ಆರ್. ಪಾಟೀಲರ ಕಡೆಯವರು ಏನು ಸತ್ಯಾಗ್ರಹ ಕುಳಿತಿದ್ದಾರೆ ಅವರಿಗೆ ತಮ್ಮ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಹೇಳಿ. ನಾನು ಆಗಲೇ ಹೇಳಿದ ಹಾಗೆ ಜಿಲ್ಲಾಧಿಕಾರಿಗಳಿಗೆ ಇವತ್ತೇ ಸೂಕ್ತ ಆದೇಶ ನೀಡುತ್ತೇನೆ. ಆದರೆ ದೊಡ್ಡವರ ಬಗ್ಗೆ ವಸೂಲಾತಿ ಕ್ರಮವನ್ನು ನಿಲ್ಲಿಸುವುದಕ್ಕೆ ಸಾಧ್ಯವಾಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿ ಶ್ರೀಮಂತರು, ಬಡವರು ಎಂಬ ಪ್ರಶ್ನೆ ಇಲ್ಲ. ಇಲ್ಲಿರು ವುದು ಭೂಮಿಗೆ ನೀರನ್ನು ತೆಗೆದುಕೊಂಡಿದ್ದಾರೆಯೇ ಇಲ್ಲವೇ ಎಂಬ ಪ್ರಶ್ನೆ. ನೀರನ್ನು ಪಡೆಯದೆ ಇದ್ದರೂ ಕರವನ್ನು ಕೊಡಬೇಕೇ ಎಂಬುದು ಇಲ್ಲಿರತಕ್ಕ ಮುಖ್ಯವಾದ ಪ್ರಶ್ನೆ.

ಶ್ರೀ ಎಸ್. ಬಂಗಾರಪ್ಪ.—ನೀರನ್ನು ಪಡೆದಿದ್ದರೆ ಅವರು ಕರವನ್ನು ಕೊಡಲಿಲ್ಲವೆಂದರೆ ಏನು ತೊಂದರೆಯಾಗುತ್ತದೆ? ಯಾರೇ ನೀರು ಪಡೆದಿದ್ದರೂ ಅವರಿಂದ ಕರವನ್ನು ವಸೂಲ್ಮಾಡದೆ ಬಿಡುವು ದಕ್ಕಾಗುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಇಲ್ಲಿ ರೈತರ ವಾದ ಏನೆಂದರೆ, ಅವರು ನಮಗೆ ನೀರು ಬಂದಿಲ್ಲ ವೆಂದು ಹೇಳುತ್ತಾರೆ, ಆದರೆ ಅಧಿಕಾರಿಗಳು ತಮ್ಮ ವರದಿಯಲ್ಲಿ ಅವರಿಗೆ ನೀರು ದೊರೆತಿದೆ ಎಂದೂ ಬರೆದಿದ್ದಾರೆ. ಇದು ಮೂಲಭೂತವಾದ ಸಮಸ್ಯೆ.

ಶ್ರೀ ಎಸ್. ಬಂಗಾರಪ್ಪ.—ಅದನ್ನು ವಿಚಾರ ಮಾಡೋಣ.

ಶ್ರೀ ಎಸ್.ಆರ್. ಬೊಮ್ಮಾಯಿ.—ಆದ್ದರಿಂದ, ತಮ್ಮ ಹೇಳಿಕೆ ಬರುವವರೆಗೆ ವಸೂಲಿ ಕ್ರಮವನ್ನು ತಡೆಹಿಡಿಯಿರಿ. ೧೫ ದಿವಸಗಳೊಳಗೆ ಸಮಗ್ರವಾಗಿ ವರದಿಯನ್ನು ಪರಿಶೀಲನೆ ಮಾಡಿ ಹೇಳಿಕೆ ಕೊಡು ತ್ತೇವೆಂದರೆ ಸತ್ಯಾಗ್ರಹವನ್ನು ನಿಲ್ಲಿಸುವುದಕ್ಕೆ ಹೇಳುತ್ತೇವೆ. ಮತ್ತು ನೀವು ಹೇಳಿಕೆ ಕೊಡುವವರೆಗೆ ವಸೂಲಾತಿ ಕ್ರಮವನ್ನು ತಡೆಹಿಡಿಯಿರಿ.

ಶ್ರೀ ಎಸ್. ಬಂಗಾರಪ್ಪ.—ನನ್ನ ಬಂದು ಸಲಹೆ ಏನೆಂದರೆ, ಈಗ ಯಾರು ನೀರು ಬಂದಿಲ್ಲವೆಂದು ಹೇಳುತ್ತಾರೋ ಅಂಥವರನ್ನು ಮುಂದೆ ಹಾಕುವುದಕ್ಕೆ ವಿಚಾರ ಮಾಡೋಣ. ನೀರು ಪಡೆದಿರುವವರು ಯಾರು ಯಾರಿದ್ದಾರೆ: ಎಂಬ ಮಾಹಿತಿ ನಮ್ಮ ಹತ್ತಿರ ಇದೆ ಅದಕ್ಕಾಗಿ ನಾನು ಸ್ವಲ್ಪ ಪಟ್ಟಾಗಿ ಹಿಡಿದಿ ದ್ದೇನೆ. ಎಲ್ಲರದ್ದನ್ನೂ ನಿಲ್ಲಿಸಿ ಎಂದರೆ ಕಷ್ಟವಾಗುತ್ತದೆ, ವಸೂಲಾಗುವುದು ಆಗುತ್ತಿರಲಿ.

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ತತ್ವವನ್ನು ನಾನು ಒಪ್ಪುತ್ತೇನೆ. ಆದರೆ, ಇಲ್ಲಿ ಯಾರು ನೀರು ಪಡೆದಿದ್ದಾರೆ, ಯಾರು ಪಡೆದಿಲ್ಲ ಎಂಬ ಬಗ್ಗೆಯೇ ಒಂದು ದೊಡ್ಡ ವಾದ ಇರುವಂಗೆ ಕೇವಲ ೧೫ ದಿವಸಗಳಲ್ಲಿ ಏನಾಗುತ್ತದೆ? ಅಧಿಕಾರಿಗಳು ಹೇಳುತ್ತಾರೆ, ರೈತರು ನೀರನ್ನು ಪಡೆದಿದಾರೆಂದು; ಆದರೆ ರೈತರು ಹೇಳುತ್ತಾರೆ ನಮ್ಮ ಜಮೀನಿಗೆ ನೀರು ಬಂದಿಲ್ಲ ಎಂದು ಅದಕ್ಕಾಗಿ ರೈತರ

ಇವತ್ತಿನ ದಿವಸ ಸತ್ಯಾಗ್ರಹ ಮಾಡುತ್ತಿದ್ದಾರೆ ಆದ್ದರಿಂದ ೧೫ ದಿನಗಳ ಮಟ್ಟಿಗೆ (ತಾವು ಹೇಳಿಕೆ ನೀಡುವವರಿಗೆ) ತಡೆಹಿಡಿಯಿರಿ ಮತ್ತು ತಾವು ಹೇಳಿಕೆ ಕೊಡುವಾಗ ಯಾರ್ಯಾರಿಂದ ವಸೂಲ್ಮಾಡಬೇಕೆಂಬುದನ್ನು ವಿವರವಾಗಿ ಹೇಳಿ.

ಶ್ರೀ ಎಸ್. ಬಂಗಾರಪ್ಪ.—ಯಾರು ನೀರು ಪಡೆದಿದ್ದಾರೆ ಎಂಬುದನ್ನು ನೋಡಿದ ಮೇಲೆಯೇ ಆ ರೀತಿ ಕಾಂಟ್ರಿಬ್ಯೂಷನ್ ಏಗೈರೆ ಫಿಕ್ಸ್ ಆಪ್ ಮಾಡಿ ವಸೂಲಾತಿ ಕ್ರಮ ತೆಗೆದುಕೊಂಡಿರುವುದು. ೧೫ ದಿವಸ ಮುಂದೆ ಹಾಕುವುದು ದೊಡ್ಡ ವಿಷಯವಲ್ಲ. ಆದರ ಬಗ್ಗೆ ಅಲ್ಲ. ಆದರೆ ನೀರು ಪಡೆದಿರುವ ವರೆಗೂ ಕೂಡ ನಾವು ನೀವು ಸೇರಿಕೊಂಡು ಸಪೋರ್ಟ್ ಮಾಡಿದಂತಾಗುತ್ತದೆ ಎಂದು.

ಶ್ರೀ ಆರ್. ಎಸ್. ಪಾಟೀಲ್.—ತಾವು ಮುಧೋಳಕ್ಕೆ ಹೋಗಿರಬಹುದು. ಅಲ್ಲಿನ ಬಸ್ ನಿಲ್ದಾಣದ ಸಮೀಪದಲ್ಲಿ ತಾಲ್ಲೂಕು ಕಛೇರಿ ಇದೆ. ಅದರ ಮೇಲೆ ಕೂಡ ಬೆಟರ್‌ಮೆಂಟ್ ಲೆವಿ ಮತ್ತು ವಾಟರ್ ರೇಟನ್ನು ಹಾಕಿದ್ದಾರೆ ಆ ಜಾಗವನ್ನು ತೆಗೆದುಕೊಂಡು ಸುಮಾರು ೧೦ ವರ್ಷಗಳು ಆಗಿರಬಹುದು. ಆದ್ದರಿಂದ, ಅಧಿಕಾರಿಗಳು ಸಂಬಂಧಪಟ್ಟ ಸ್ಥಳಕ್ಕೆ ಹೋಗಿ ಪ್ರತ್ಯಕ್ಷವಾಗಿ ನೋಡಿ ಮಾಡಿರುತ್ತಾರೆಂದು ಹೇಳುವುದಕ್ಕೆ ಬರುವುದಿಲ್ಲ. ಅವರು ಕಛೇರಿಯಲ್ಲಿ ಕುಳಿತುಕೊಂಡು ಬರೆದಿರುತ್ತಾರೆ. ಆದ ಕಾರಣ, ಕೆವಲ ೧೫ ದಿವಸಗಳ ಕಾಲ ಮುಂದೂಡಿದರೆ ಇವತ್ತು ಅಲ್ಲಿ ೧೦ ಸಾವಿರ ಜನರೇನು ಸತ್ಯಾಗ್ರಹ ಕುಳಿತಿದ್ದಾರೆ ಅವರು ವಾಪಸ್ಸು ಬರುತ್ತಾರೆ. ಆಗ ತಮಗೂ ಕೂಡ ಸಮಾಧಾನದಿಂದ ಕುಳಿತು ನಿರ್ಣಯ ತೆಗೆದುಕೊಳ್ಳುವುದಕ್ಕೆ ಅನುಕೂಲವಾಗುತ್ತದೆಂದು ಹೇಳುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ತಾಲ್ಲೂಕು ಕಛೇರಿಗೆ ಯಾರು ಕೂಡ ಬೆಟರ್‌ಮೆಂಟ್ ಲೆವಿಯನ್ನು ಹಾಕುವುದಿಲ್ಲ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅದು ರೆವೆನ್ಯೂ ಸರ್ವೆ ನಂಬರಿಗೇ ಸೇರಿಲ್ಲ ಅದು ಹಳೆಯ ವಿಚಾರ,

ಶ್ರೀ ಎಸ್. ಬಂಗಾರಪ್ಪ.—ಮಾನ್ಯ ಅಧ್ಯಕ್ಷರೇ, ತಾಲ್ಲೂಕು ಆಫೀಸಿನ ವಿಚಾರವಾಗಿ ಮಾನ್ಯ ಸದಸ್ಯರು ಹೇಳಿದ್ದಾರೆ. ಆದರ ವಿವರ ಈಗ ನನ್ನಲ್ಲಿಲ್ಲ. ಒಂದು ವೇಳೆ ಅದೇ ನಂಬರಿನಲ್ಲಿ ಬೇರೆ ಭಾಗ ನೀರು ಪಡೆಯುತಕ್ಕದ್ದು ಇರಬಹುದು. ಅದು ನನಗೆ ಗೊತ್ತಿಲ್ಲ. ಒಂದು ವೇಳೆ ಸುಮ್ಮನೆ ತಾಲ್ಲೂಕು ಕಛೇರಿಯ ಎಲ್ಲಾ ಭಾಗಕ್ಕೂ ಹಾಕಿದ್ದರೆ ಅದು ತಪ್ಪಾಗುತ್ತದೆ.

ಶ್ರೀ ಆರ್.ಎಸ್ ಪಾಟೀಲ್.—ಶ್ರೀ ದೇವರಾಜ ಅರಸ್ ಅವರು ಮುಖ್ಯ ಮಂತ್ರಿಗಳಾಗಿ ಅಲ್ಲಿ ಹೋಗಿದ್ದಾಗಲೂ ಈ ವಿಷಯವನ್ನು ಅವರ ಗಮನಕ್ಕೆ ತಂದಿದ್ದರು. ಈ ಬಗ್ಗೆ ಉಪವಾಸ ಸತ್ಯಾಗ್ರಹವನ್ನೂ ಆ ಭಾಗದವರು ಮಾಡಿದ್ದರು.

ಶ್ರೀ ಎಸ್.ಆರ್. ಬೊಮ್ಮಾಯಿ.—ಶ್ರೀಮಂತರು ಯಾರಿದ್ದಾರೆ, ಯಾರು ನೀರು ತೆಗೆದುಕೊಂಡಿಲ್ಲ ಆ ವಿವರವೆಲ್ಲಾ ನಾನು ತಿಳಿಸುವುದಕ್ಕಾಗುತ್ತದಯೇ? ಅದೆಲ್ಲಾ ನಿಮಗೇ ಗೊತ್ತಿರಬೇಕು. ನಾನು ಹೇಳುವುದನ್ನು ದಯವಿಟ್ಟು ಅರ್ಥ ಮಾಡಿಕೊಳ್ಳಿ.. ನಿಮ್ಮ ಇಲಾಖೆಯ ದಾಖಲೆಯಲ್ಲಿ ನೀರು ಕೊಡದಿದ್ದರೂ ನೀರು ತೆಗೆದುಕೊಂಡಿದ್ದಾರೆ ಎಂದು ಬರೆದಿದ್ದಾರೆ, ಆ ದಾಖಲೆಗಳು ಸರಿಯಿಲ್ಲ ಎಂದು ರೈತರು ಹೇಳುತ್ತಿದ್ದಾರೆ. ಆದ್ದರಿಂದ ದಯವಿಟ್ಟು ಸಮಗ್ರವಾಗಿ ಪರಿಶೀಲನೆ ಮಾಡಿ ಯಾವುದು ನಿಜ ಎಂಬುದನ್ನು ನೋಡಿ ನಂತರ ತೆರಿಗೆಯನ್ನು ವಸೂಲು ಮಾಡಿ. ನಾನು ರೈತರು ಹೇಳುವುದೆಲ್ಲಾ ನಿಜ ಎಂದು ಹೇಳುವುದಿಲ್ಲ. ಸಮಗ್ರ ವಿಚಾರಣೆಯಾಗುವವರೆಗೆ ನೀರು ತೆಗೆದುಕೊಂಡಿರುವವರು ಹಣ ಕೊಡಲಿ, ತೆಗೆದುಕೊಳ್ಳದೇ ಇರುವವರು ಕೊಡುವುದು ಬೇಡ ಎಂದು ಹೇಳುವುದು ಸರಿಯಲ್ಲ. ನಿಮ್ಮ ದಾಖಲೆಗಳೇ ಸರಿಯಿಲ್ಲ ಎಂದು ರೈತರು ಹೇಳುವಾಗ ಹೇಗೆ ಇದನ್ನು ಪತ್ತೆ ಹಚ್ಚುವುದು? ಆದ್ದರಿಂದ ದಯವಿಟ್ಟು ಎಲ್ಲಾ ಸರಿಯಾಗಿ ಪರಿಶೀಲನೆ ಮಾಡಿ ನಿಮ್ಮ ಹೇಳಿಕೆ ಕೊಡಿ. ಅಲ್ಲಿಯವರೆಗೆ ಹಣ ವಸೂಲಿ ಮಾಡುವುದನ್ನು ತಡೆಹಿಡಿಯಿರಿ.

ಶ್ರೀ ಎಸ್. ಬಂಗಾರಪ್ಪ.—ಯಾರು ನೀರು ಪಡೆದಿರುತ್ತಾರೋ ಅವರ ಹತ್ತಿರ ಏತಕ್ಕೆ ವಸೂಲು ಮಾಡಬಾರದು?

ಶ್ರೀ ಎಸ್.ಆರ್. ಬೊಮ್ಮಾಯಿ.—ನಿಮ್ಮ ರೆಕಾರ್ಡ್ ಪ್ರಕಾರ ಅವರು ನೀರು ಪಡೆದಿದ್ದಾರೆ ಎಂದು ಹೇಳುತ್ತಿದ್ದೀರಿ. ಆದರೆ ನೀವು ಹೇಳುವುದು ಸುಳ್ಳು ಎಂದು ರೈತರು ಹೇಳುತ್ತಿದ್ದಾರೆ. ಇದರಿಂದ ಇಲಾಖೆಯವರಿಗೂ ನಿಮಗೂ ಜಗಳ ಶುರುವಾಗಿದೆ. ಈಗ ಸರಿಯಾಗಿ ಪರಿಶೀಲನೆ ಮಾಡದೆ ಯಾವುದು ನಿಜ ಎಂದು ಹೇಳುವುದು ಕಷ್ಟವಾಗುತ್ತದೆ.

ಶ್ರೀ ಎಸ್. ಬಂಗಾರಪ್ಪ.— ನನಗೆ ಕಾಲಾವಕಾಶ ಕೊಟ್ಟರೆ ಈ ಬಗ್ಗೆ ಹೇಳುತ್ತೇನೆ.

ಶ್ರೀ ಎಸ್.ಆರ್. ಬೊಮ್ಮಾಯಿ.—ಅಲ್ಲಿಯವರೆಗೆ ವಸೂಲಿ ಮಾಡಬಾರದೆಂದು ತಿಳಿಸಿ.

ಶ್ರೀ ಎಸ್. ಬಂಗಾರಪ್ಪ.— ಈ ವಿಷಯ ಆ ಮೇಲೆ ಹೇಳುತ್ತೇನೆ.

MATTER UNDER RULE 312

re: Giving proper protection to Smt. Arasamma of Narasapura village in Nelamangala Taluk.

† ಶ್ರೀ ಬಿ. ಸುಬ್ಬಯ್ಯಶೆಟ್ಟಿ (ಸುರತ್ಕಲ್).— ನಮ್ಮ ಕರ್ನಾಟಕದಲ್ಲಿ ಭೂಸುಧಾರಣೆ ಕಾನೂನನ್ನು ಸರ್ಕಾರ ಅನುಷ್ಠಾನಕ್ಕೆ ತರುವಲ್ಲಿ ತನ್ನ ಗಂಭೀರತೆಯನ್ನು ಕಳೆದುಕೊಂಡಿದೆ ಹಾಗೂ ದುರ್ಬಲ ವರ್ಗದ ಮೇಲೆ ಅವ್ಯಾಹತವಾಗಿ ದಾಳಿ ನಡೆಯುತ್ತಿದೆ ಎಂಬುದಕ್ಕೆ ಈ ದಿನ ನಿಯಮ ೩೧೨ರ ಕೆಳಗೆ ಪ್ರಸ್ತಾಪಿಸುತ್ತಿರತಕ್ಕ ವಿಷಯ ನಿದರ್ಶನವಾಗಿದೆ. ಶ್ರೀಮತಿ ಅರಸಮ್ಮ ಎಂಬ ೬೫ ವರ್ಷದ ಹರಿಜನ ಮಹಿಳೆ ಮತ್ತು ಇವರ ಕುಟುಂಬದವರು ನರಸಾಪುರದಲ್ಲಿ ೫೦ ವರ್ಷದಿಂದ ಗೇಣಿದಾರರಾಗಿ ಸಾಗುವಳಿ ಮಾಡುತ್ತಿದ್ದಾರೆ. ಇತ್ತೀಚೆಗೆ ಅಂದರೆ ಜೂನ್ ೧೮ರಂದು ಅವರ ಭೂಮಾಲೀಕರಾದ ಶ್ರೀ ವೆಂಕಟ ರಾಮಯ್ಯ ಎಂಬುವರು ಬಹಳ ಜನ ಗೂಂಡಾಗಳನ್ನು ಕರೆದುಕೊಂಡು ಹೋಗಿ ಹೊಲಕ್ಕೆ ನಂಗ್ಗಿ ಅವರ ಮೇಲೆ ಹಲ್ಲೆ ಮಾಡಿದ್ದಾರೆ. ನಂತರ ಶ್ರೀಮತಿ ಅರಸಮ್ಮನವರು ಪೋಲೀಸ್ ಸ್ಟೇಷನ್ನಿಗೆ ಹೋದರು. ಅಲ್ಲಿ ಯಾರೂ ಕೇಳುವವರಿಲ್ಲ. ಸರ್ಕಾರೀ ಆಸ್ಪತ್ರೆಗೆ ಹೋದರು. ಅಲ್ಲೂ ಯಾರೂ ಕೇಳುವವರಿಲ್ಲ. ರೆವಿನ್ಯೂ ಅಧಿಕಾರಿಗಳು ಯಾರೂ ಇವರ ಬಗ್ಗೆ ಕೇಳುವವರಿಲ್ಲ. ಹೀಗಾಗಿ she was driven from pillar to post. ೧೮ನೇ ತಾರೀಖಿನಿಂದ ೨೪ನೇ ತಾರೀಖಿನವರೆಗೂ ಪೋಲೀಸ್ ಸ್ಟೇಷನ್ನಿನಲ್ಲಿ ಇವರ ದೂರನ್ನು ಸ್ವೀಕರಿಸುವವರು ಇಲ್ಲ. ೨೪ನೇ ತಾರೀಖು ಸ್ವೀಕಾರ ಮಾಡಿದ್ದಾರೆ. ಬೇಕೆಂತಲೇ ಹೀಗೆ ಮಾಡಿದ್ದಾರೆ. ೧೮ನೇ ತಾರೀಖು ಘಟನೆ ನಡೆದಿದ್ದರೂ ೨೪ನೇ ತಾರೀಖಿನವರೆಗೂ ಕಂಪ್ಲೇಂಟ್ ಕೊಡಲಿಲ್ಲ, ಲೇಟಾಗಿ ಕೊಟ್ಟಿದ್ದಾರೆ ಎಂಬುದನ್ನು ದಾಖಲು ಮಾಡುವುದಕ್ಕೋಸ್ಕರ ಈ ರೀತಿ ತಡ ಮಾಡಿದ್ದಾರೆ. ಲೇಟಾಗಿ ಕಂಪ್ಲೇಂಟ್ ಕೊಟ್ಟರು ಎಂದರೆ ಕೇಸ್ ದುರ್ಬಲವಾಗುತ್ತದೆ ಎಂಬ ಕಾರಣದಿಂದ ಕಂಪ್ಲೇಂಟನ್ನು ಸ್ವೀಕಾರ ಮಾಡಿಲ್ಲವೆಂದು ಊಹಿಸಬೇಕಾಗುತ್ತದೆ. ನಂತರ ಪತ್ರಿಕೆಯಲ್ಲಿ ಈ ವಿಷಯ ವರದಿಯಾಗಿತ್ತು. ಪ್ರಜಾವಾಣಿ, ಡೆಕ್ಕನ್ ಹೆರಾಲ್ಡ್ ಮುಂತಾದ ಪತ್ರಿಕೆಗಳಲ್ಲಿ ವರದಿಯಾಗಿದೆ. ಮಾನ್ಯ ಮಂತ್ರಿಗಳು ತಮ್ಮ ಹೇಳಿಕೆಯಲ್ಲಿ ೨೪ನೇ ತಾರೀಖು ಕೆಲವರನ್ನು ಬಂಧಿಸಲಾಗಿದೆ ಎಂದು ಹೇಳಿದ್ದಾರೆ. ಆದರೆಲ್ಲೂ ನಾವು ನೋಟೀಸ್ ಕೊಟ್ಟಮೇಲೆ ಅರೆಸ್ಟ್ ಮಾಡಿದ್ದಾರೆ. ಈ ಬಗ್ಗೆ ಪತ್ರಿಕೆಯಲ್ಲಿ ಪ್ರಸ್ತಾಪಿಸಿರುವ ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುವುದಕ್ಕೆ ಇಷ್ಟಪಡುತ್ತೇನೆ. ಇದು ಬಹು ಮುಖ್ಯವಾದ ವಿಚಾರ.

In Deccan Herald, dated 26th June, 1980, it has been reported as under:—

> "Attrocities on Harijans by powerful forces in the rural areas are of late increasing and the pathetic case of 65 years old person of Narasapur village in Nelamangala taluk seems to be the latest to surface. Illiterate and socially ostracised harijans in particular appear to have become an easy target of attack..."